Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 20, ಗಂಗಾನಗರ, ಬೆಂಗಳೂರು

ಸಂಖ್ಯೆ:ಸ.ಅ/ವಾ–20/ಪಿ.ಆರ್./12/2020–21

ದಿನಾಂಕ: 12/03/2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿ.ಎಂಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್./35/2021 ದಿನಾಂಕ 05/12/2020 ರವರ ಆದೇಶದಂತೆ ದಿನಾಂಕ 25/03/2021 ರಂದು 10.00 ಗಂಟೆಗೆ ಬೆಳಿಗ್ಗೆ ವಾರ್ಡ್ ನಂ.20, ಗಂಗಾನಗರ ವಾರ್ಡ್ 108 ಬಸ್ ನಿಲ್ದಾಣದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಸಭೆಗೆ ಹಾಜರಾಗಿದ್ದವರ ವಿವರಗಳು**

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ. ಬಿ.ಎಸ್. ಪ್ರಹಲಾದ್ | ವಾಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಮ್‌ರಾವ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ನಂ.20 |
| 3 | ಶ್ರೀಮತಿ ಶಾಹಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ. ಶ್ರೀನಿವಾಸ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.20, ಸದಸ್ಯರು |
| 5 | ಶ್ರೀಮತಿ ಸುವರ್ಣ ದೇವಿ | ವರ್ಕ್ ಇನ್ಸ್‌ಪೆಕ್ಟರ್, ಬಿಡಬ್ಲ್ಯೂ.ಎಸ್.ಎಸ್.ಬಿ. |
| 6 | ಶ್ರೀ. ಸುರೇಶ್ ರಾವ್ | ಟ್ರಾಫಿಕ್ ಪೊಲೀಸ್, ಆರ್.ಟಿ.ನಗರ, ಬೆಂಗಳೂರು–32 |
| 7 | ಶ್ರೀ. ಬಿ.ಕೆ. ವಾಟಿ | ಮಾರ್ಷಲ್, ವಾರ್ಡ್ ನಂ.20 |
| 8 | ಶ್ರೀಮತಿ ಶಾಲಿನಿ ದೇಶ್‌ಪಾಂಡೆ | ಅಸೋಸಿಯೇಷನ್ ಪ್ರೆಸಿಡೆಂಟ್, ಹೆಚ್.ಎಂ.ಟಿ. ಲೇಔಟ್ |
| 9 | ಡಾ॥ ಎಸ್.ಎಂ. ಜಯದೇವಪ್ಪ | ಸಾರ್ವಜನಿಕರು |
| 10 | ಶ್ರೀ. ಪ್ರಸಾದ್ ಎಂ.ಆರ್. | ಸಾರ್ವಜನಿಕರು |
| 11 | ಶ್ರೀ. ಶ್ರೀನಿವಾಸ್ | ಸಾರ್ವಜನಿಕರು |
| 12 | ಶ್ರೀ. ರವಿ ಭಕ್ತಾಳ್ | ಸಾರ್ವಜನಿಕರು |
| 13 | ಶ್ರೀ. ಮುನಿಯಪ್ಪ | ಸಾರ್ವಜನಿಕರು |
| 14 | ಶ್ರೀ. ಶಿವಕುಮಾರ | ಸಾರ್ವಜನಿಕರು |
| 15 | ಶ್ರೀ. ರಘುವೀರ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಬಿ.ಎಸ್. ಪ್ರಹಲಾದ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ.20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಕರಿಗೆ ತಿಳಿಯಪಡಿಸಿದರು.

- ಫುಟ್ ಪಾತ್ ಕ್ಲೀನಿಂಗ್ ಮಾಡಿದ್ದು ಒಳ್ಳೆಯದು, ವ್ಯಾಪಾರಿಗಳಿಗೆ ಆಧಾರ್ ಗ್ರೂಪ್ ಮೇಲೆ ತಲಾ ಒಂದೊಂದು ಗಾಡಿಗೆ ಅನುಮತಿ ನೀಡಿ (ಸ್ಥಳಿಯರಿಗೆ) ಎಂಬ ವಿಷಯ ಶ್ರೀ. ಶ್ರೀನಿವಾಸ್ ರವರು ಚರ್ಚಿಸಿದರು.
- ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ ನಾಲ್ಕು ಚಕ್ರದ ವಾಹನಗಳಿಗೆ ಫೈನ್ ಹಾಕಿ ತೆಗೆಸಿ.
- ಸಿ.ಬಿ.ಐ. ಎದುರುಗಡೆ ರೋಡ್‌ನಲ್ಲಿ ಕಂಬಿಗಳು ಎದ್ದಿದೆ. ಅದನ್ನು ಸರಿಪಡಿಸಿ ಎಂದು ಚರ್ಚೆ ಮಾಡಿದರು.
- 126, 4ನೇ ಮೈನ್‌ನಲ್ಲಿ ಪಾಟ್‌ವಾಲ್ ಹಾಕಬೇಕೆಂದು ತಿಳಿಸಿದರು.
- ವಾರ್ಡ್ 20ರಲ್ಲಿನ ಸಿಲ್ವೆಂಟ್ ಟ್ರಾಕ್ಟರ್ ಸರಿಯಾಗಿ ವಾರ್ಡಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದರ ಬಗ್ಗೆ ಚರ್ಚಿಸಿದರು.
- ಹೆಚ್.ಎಂ.ಟಿ. ಲೇಔಟ್‌ನಲ್ಲಿ ನೀರು ರೋಡಿಗೆ ಹರಿಯುವಂತೆ ಬಿಡುತ್ತಿದ್ದಾರೆ ಎಂಬುದರ ಬಗ್ಗೆ ಚರ್ಚಿಸಿದರು.
- ಡ್ರೈವಿಂಗ್ ಸ್ಕೂಲ್ ನವರು ನೋ ಪಾರ್ಕಿಂಗ್ ಜಾಗದಲ್ಲಿ ಅಲ್ಲಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದಾರೆ. ಅದನ್ನು ತಡೆಯಬೇಕೆಂದು ಎಂಬುದರ ಕುರಿತು ಚರ್ಚಿಸಿದರು.
- ಯಾರ ಅಂಗಡಿಯ ಮುಂದೆ ತಳ್ಳೋ ಗಾಡಿಗಳು ನಿಲ್ಲಿಸುತ್ತಾರೋ ಆ ಅಂಗಡಿಯವರೆ ಜವಾಬ್ದಾರರು. ತಮ್ಮ ತಮ್ಮ ಅಂಗಡಿಯ ಮುಂದೆ ತಳ್ಳೋ ಗಾಡಿಗಳು ನಿಲ್ಲಿಸಲಾರಧಾಗೆ ನೋಡಿಕೊಳ್ಳಬೇಕು ಎಂದು ಚರ್ಚಿಸಿದರು.
- ತಳ್ಳೋ ಗಾಡಿ ಯಾರ ಅಂಗಡಿಯ ಮುಂದೆ ನಿಲ್ಲಿಸಿರುತ್ತಾರೋ ಆ ಅಂಗಡಿಯವರಿಗೆ ಫೈನ್ ಹಾಕಿ ಗಾಡಿ ಎತ್ತಿಸಬೇಕು ಎಂದು ಚರ್ಚಿಸಿದರು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.20

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.20

ಪ್ರತಿಯನ್ನು:

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು(ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ರವರ ಅವಗಾಹನೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
9. ಸಹಾಯಕ ಅಭಿಯಂತರರು (ವಿದ್ಯುತ್/ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10. ಕಛೇರಿ ಕಡತಕ್ಕೆ.